267ರಡಿ ಜಿಲ್ಲಾ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್‌ಗಳ ಹಾಗೂ ಗ್ರಾಮ ಪಂಚಾಯತ್‌ಗಳ ಆರ್ಥಿಕ ವ್ಯವಸ್ಥೆಯನ್ನು ಪರಿಶೀಲಿಸಲು ಮತ್ತು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ರಾಜ್ಯ ಹಣಕಾಸು ಆಯೋಗವನ್ನು ರಚಿಸಲಾಗಿದೆ.

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲ.

ವಿಷಯ:- ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ವಂತಿಗೆ ಸ್ವೀಕಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 137 (201)

ಶ್ರೀ ಡಾ:ಎಂ.ಪಿ.ಕರ್ಕಿ (ಕುಮಟಾ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಹೊಸ ಶೈಕ್ಷಣಿಕ ನೀತಿಯ ಪ್ರಕಾರ ಖಾಸಗಿ ಶಿಕ್ಷಣ ಸಂಸ್ಥೆಗಳು ವಂತಿಗೆಯನ್ನು ಸ್ವೀಕರಿಸಬಾರದೆಂಬುದು ಅಸಮಂಜಸವಲ್ಲವೆ?

ಆ) ಸರ್ಕಾರವು ಖಾಸಗಿ ಶಿಕ್ಷಣ ಸಂಸ್ಥೆಗಳ ಚಟುವಟಿಕೆಗಳ ವಿಸ್ತರಣೆಗೆ ಅನುದಾನವನ್ನು ನೀಡದೆ ಇರುವುದರಿಂದ ಖಾಸಗಿ ಆಡಳಿತ ಮಂಡಳಿಗಳು ವಂತಿಗೆಯನ್ನು ಸ್ವೀಕರಿಸಲು ಅನುಮತಿಸುವುದು ಸೂಕ್ತವಲ್ಲವೇ?

ಶ್ರೀ ಬಿ.ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):-

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಗ್ರಾಮ ಪಂಚಾಯಿತಿಗಳಲ್ಲಿ ತೆರವಾಗಿರುವ ಸ್ಥಾನಗಳ ಭರ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 129 (405)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಗುಂಡ್ಲುಪೇಟೆ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರ ಅವಧಿ ನಿಗದಿಗೊಳಿಸಲಾಗಿದೆಯೇ?

ಆ) ಈ ಬಗ್ಗೆ ನೇಮಿಸಿದ್ದ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಈ) ಗ್ರಾಮ ಪಂಚಾಯ್ತಿಗಳಲ್ಲಿ ಪ್ರಾರಂಭದಿಂದಲೂ ಖಾಲಿ ಇರುವ ಪರಿಶಿಷ್ಟ

ಜನಾಂಗಕ್ಕೆ ಮೀಸಲು ಸ್ಥಾನಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗಿದೆಯೇ?

ಉ) ಹಾಗಿದ್ದಲ್ಲಿ ಇದುವರೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ಹೌದು.

ಆ) ಹೌದು.

ಇ) ಪರಿಶೀಲಿಸಲಾಗುತ್ತಿದೆ.

ಈ) ಹೌದು.

ಉ) ರಾಜ್ಯಚುನಾವಣಾ ಆಯೋಗವು ಗ್ರಾಮ ಪಂಚಾಯ್ತಿಗಳಲ್ಲಿ ತೆರವಾಗುವ ಸ್ಥಾನಗಳನ್ನು ತುಂಬಲು ಕಾಲಕಾಲಕ್ಕೆ ಚುನಾವಣೆ ನಡೆಸುತ್ತಿದೆ.

ವಿಷಯ:- ಕೊಡಗಿನ ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿ ಇರತಕ್ಕ ವೈದ್ಯರ ಹುದ್ದೆಗಳನ್ನು ಭರ್ತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 140 (501)

ಶ್ರೀ ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲಾ ಕೇಂದ್ರದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳೆಷ್ಟು? ಹಾಗೂ ಮಹಿಳಾ ವೈದ್ಯರ ಖಾಲಿ ಹುದ್ದೆಗಳೆಷ್ಟು?

ಆ) ಈ ಖಾಲಿ ಹುದ್ದೆಗಳನ್ನು ತುಂಬಲು ಕೈಗೊಂಡಿರುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಸರ್ಕಾರಿ ಜಿಲ್ಲಾ ಆಸ್ಪತ್ರೆ, ಕೊಡಗು, ಇಲ್ಲಿಗೆ ಒಟ್ಟು 22 ವೈದ್ಯರ ಹುದ್ದೆಗಳು (ಹಿರಿಯ ತಜ್ಞರು) ಮಂಜೂರಾಗಿದ್ದು, 5 ಹುದ್ದೆಗಳು ಖಾಲಿ ಇವೆ. ಜಿಲ್ಲಾ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯರ ಹುದ್ದೆಯೆಂದು ಮಂಜೂರಾಗಿರುವುದಿಲ್ಲ. ಮೂರು ಪ್ರಸೂತಿ ತಜ್ಞರ ಹುದ್ದೆ ಇದ್ದು ಎರಡು ಹುದ್ದೆ ಭರ್ತಿಯಾಗಿವೆ. ಖಾಲಿ ಇರುವ 5 ಹುದ್ದೆಗಳ ಪೈಕಿ ಒಂದು ಪ್ರಸೂತಿ ತಜ್ಞರ ಹುದ್ದೆ ಖಾಲಿ ಇರುತ್ತದೆ.

ಆ) ಈ ಖಾಲಿ ಹುದ್ದೆಗಳನ್ನು ಸೇವಾನಿರತ ವೈದ್ಯರುಗಳು ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಂದ ಮತ್ತು ವೈದ್ಯರುಗಳಿಗೆ ಪದೋನ್ನತಿ ನೀಡಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.